(SRI KADIDAL MANJAPPA).

(*c*) Public Works Department.

(*d*) No.

(*e*) Does not arise in view of answer to (*d*) above.

ಶ್ರೀ ಬಿ. ಹುಚ್ಚೇಗೌಡರು.—ಸ್ವಾಮಿ, ಕಳೆದ 5 ವರ್ಷಗಳಿಂದ ಕೇಂದ್ರದವರಿಂದ ನಮಗೆ ಬಂದಿರುವ ಮೊಬಲಗು 30 ಲಕ್ಷ 34 ಸಾವಿರದ 566 ರೂ. ಗಳು ಎಂದು ಹೇಳಿದ್ದೀರಿ. ಈ ಪೈಕಿ ಖರ್ಚಾಗಿರತಕ್ಕ ಮೊಬಲಗೆಷ್ಟು?

Sri Kadidal MANJAPPA.—We have given the figures. ಮೊದಲನೆಯ 2 ವರ್ಷಗಳಲ್ಲಿ ಇದರ ಖರ್ಚು ನಮ್ಮ ಸ್ಟೇಟ್ ರೆವಿನ್ಯೂನಲ್ಲಿ ಬೆರೆಸಿಹೋಗಿ ಖರ್ಚಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ಹಣವನ್ನು ಖರ್ಚುಮಾಡತಕ್ಕ ಬಗ್ಗೆ ತಾವು ತಮ್ಮ proposalsಗಳನ್ನೇನಾದರೂ ಕಳುಹಿಸಿಕೊಟ್ಟಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು, ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆಯೇ ತಾವು ಖರ್ಚುಮಾಡಬೇಕಾಗಿರುವ ಪ್ರತಿಯೊಂದು ಐಟಂನ್ನೂ ಅವರು approve ಮಾಡಲೇಬೇಕೆಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು; ಅವರು ನಮ್ಮ ಪ್ರತಿಯೊಂದು proposal ನ್ನೂ approve ಮಾಡಲೇಬೇಕು. ಹಾಗೆ ಅವರ approval ಇಲ್ಲದೆ ನಾವು ಏನನ್ನೂ ಖರ್ಚುಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ತಾವೀಗ ಏನೇನು proposal ಗಳನ್ನು ಕಳುಹಿಸಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಈ ಪೆಟ್ರೋಲ್ ಸೆಸ್ಸನ್ನು ಸಂಸ್ಥಾನದಲ್ಲಿರತಕ್ಕ ಎಲ್ಲಾ ಭಾಗದಲ್ಲೂ ವಸೂಲುಮಾಡುತ್ತಿರುವುದರಿಂದ, ಇದರಲ್ಲಿ ಸ್ವಲ್ಪ ಭಾಗವನ್ನು ಜಿಲ್ಲಾ ಬೋರ್ಡುಗಳಿಗೆ ಒದಗಿಸಲಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಜಿಲ್ಲಾ ಬೋರ್ಡುಗಳಿಗೆ ಯಾವ ಯಾವ ರೆವೆನ್ಯೂ ಕೊಡಬೇಕೋ ಅವುಗಳೆಲ್ಲವನ್ನೂ ಒದಗಿಸಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ರಸ್ತೆ ಮತ್ತು ಸೇತುವೆ ಇತ್ಯಾದಿಗಳಿಗೆ ಇಷ್ಟಿಷ್ಟು ಮೊಬಲಗನ್ನು ಕೊಡಬೇಕೆಂಬುದರ ಬಗ್ಗೆ ತಾವೂ ಒಂದು ಪ್ರೋಗ್ರಾಂ ಹಾಕಿಕೊಂಡಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದೆಲ್ಲಾ ಅಯಾ ಕೆಲಸಗಳ ಆವಶ್ಯಕತೆಯ ಮೇರೆ ನಡೆದುಕೊಂಡುಹೋಗತಕ್ಕದ್ದಾಗಿದೆ.

Repairing the breach of Kadle Voddu near Shimoga.

Q.—364. **Sri S. R. NAGAPPA SETTY** (Shimoga).—

Will the Government be pleased to state:—

(*a*) how many years ago Barahalla, which is situated eight miles from Shimoga, breached;

(*b*) whether petitions have been received from raiyats for repairing this voddu and if so, how many years back;

(*c*) how many estimates have been prepared for this work since the last twenty years;

(*d*) the cost that is likely to be incurred for this work?

A.—**Sri Kadidal MANJAPPA** (Minister for Revenue and Public Works).—

(*a*) The question is not clear. (Kadle voddu which is across Barahalla might have breached about the year 1890).

(*b*) Yes. From about 30 years back.

(*c*) Four.

In 1927-28 for	Rs.	23,700.
In 1944	Rs.	29,000.
In 1946	Rs.	35,000.
In 1951	Rs.	1,56,400.

(*d*) 1,56,400.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಈ ಒಡ್ಡಿನ ಕೆಳಗೆ ಎಷ್ಟು ಎಕರೆ ತರೀ ಸಾಗುವಳಿಗೆ ಬರುತ್ತದೆ?

(ಉತ್ತರವಿಲ್ಲ).

Mr. SPEAKER.—Many questions are disallowed. This is one of them. The information asked for is so exhaustive that even this question ought not to have been included.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಈ ಹಳ್ಳದಲ್ಲಿ ವರ್ಷಂಪ್ರತಿಯೂ ನೀರಿರುತ್ತದೆಯೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಗೊತ್ತಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಈ ಒಡ್ಡು ಒಡೆದುಹೋದದ್ದು ತಾವು ತಿಳಿಸಿರುವ ಪ್ರಕಾರ 1890ರಲ್ಲಿ ಅಲ್ಲ, ಅದು ಒಡೆದು ಹೋಗಿರುವುದು 1926ರಲ್ಲಿ ಎಂದು ಹೇಳಿದರೆ ಒಪ್ಪುತ್ತೀರಾ?

Sri Kadidal MANJAPPA.—It is wrong. Perhaps it is due to the typist's mistake. The breach was in the year 1924.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ರೈತರಿಂದ ಅರ್ಜಿಗಳು ಬಂದಿರುವುದು 30 ವರ್ಷಗಳ ಕೆಳಗೆ ಎಂದು ಹೇಳಿದ್ದೀರಿ. ಆದರೆ ಆ ಅರ್ಜಿಗಳು ಇಲ್ಲಗೆ 4 ವರ್ಷಗಳ ಕೆಳಗೆ ತಮ್ಮಲ್ಲಗೆ ಬಂದವುಗಳೆಂದರೆ ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಇರಬಹುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ರೈತರಿಂದ ಮುಚ್ಚಳಿಕೆ ಬರೆಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವುಗಳನ್ನು ರೆವೆನ್ಯೂ ಇರಾಖೆಗೆ ಕಳುಹಿಸಲಾಗಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಈಗ ಆ ಪ್ರದೇಶದಲ್ಲಿ ಜನ ಸಂಖ್ಯೆ ಕಡಮೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಹಾಗೆ ಕಡಮೆಯಾಗಲು ಈ ಒಡ್ಡನ್ನು ನಿರ್ಮಾಣ ಮಾಡದಿರುವುದೇ ಕಾರಣವೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ನಮ್ಮ ಗಮನಕ್ಕೆ ಬಂದಿಲ್ಲ. ಹಾಗೆ ಜನಸಂಖ್ಯೆ ಕಡಮೆಯಾಗುತ್ತಿರುವುದಕ್ಕೆ ನಾನಾ ಕಾರಣಗಳಿರಬಹುದು. ಆ ಪೈಕಿ ಇದೂ ಒಂದಾಗಿರಬಹುದು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು (ಗೌರಿಬಿದನೂರು).—ಹೀಗೆ ಎಸ್ಟಿಮೇಟುಗಳು ವರ್ಷೇವರ್ಷೇ ವ್ಯತ್ಯಾಸವಾಗುವುದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪನವರು.—ಆಯಾ ವರ್ಷದಲ್ಲಿರತಕ್ಕ ಕೂಲಿ ದರ ಮತ್ತು ಸಾಮಾನುಗಳ ದರ ಇತ್ಯಾದಿಗಳೆಲ್ಲವೂ ಆ ವ್ಯತ್ಯಾಸಕ್ಕೆ ಕಾರಣಗಳಾಗಿವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಅಂದರೆ 1927–28ರಲ್ಲಿ ತಯಾರಿಸಿದ್ದ ಎಸ್ಟಿಮೇಟಿಗೂ ಮತ್ತು ಈಗ ಹೊಸದಾಗಿ ತಯಾರಿಸಿರತಕ್ಕ ಎಸ್ಟಿಮೇಟಿಗೂ 1 ಲಕ್ಷ 48 ಸಾವಿರ ಚಿಲ್ಲರೆ ಜಾಸ್ತಿಯಾಗಿರುತ್ತದೆ. ಇಷ್ಟೊಂದು ವ್ಯತ್ಯಾಸವಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು ಕೆಲವು ವೇಳೆ ಒಂದಕ್ಕೆ 5ರಷ್ಟು 6ರಷ್ಟು ವ್ಯತ್ಯಾಸವಾಗುತ್ತದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಹೀಗೆ ಕೆಲಸವನ್ನು ನಿಧಾನಮಾಡದೆ ಆ ವರ್ಷವೇ ಕೈಕೊಂಡಿದ್ದರೆ ಸರ್ಕಾರಕ್ಕೆ ಇಷ್ಟೊಂದು ಹಣ ಉಳಿತಾಯವಾಗುತ್ತಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ತಮ್ಮ ಅಭಿಪ್ರಾಯ.

Collection of contribution from raiyats below Marconahalli Reservoir.

Q.—405. **Sri N. HUCHMASTHYGOWDA** (Huliyurdurga).—

Will the Government be pleased to state:—

(*a*) the total amount of contribution to be collected from raiyats on the wet *achkat* below the Marconahalli Reservoir;

(*b*) out of this, the amount that has been collected up to 31st March 1952;

(*c*) the amount of contribution fixed per acre;

(*d*) the number of instalments in which the contribution amount has to be collected?

A.—**Sri Kadidal MANJAPPA** (Minister for Revenue and Public Works).—

(*a*) Rs. 17,50,000.

(*b*) Rs. 8,63,690.

(*c*) Rs. 125 per acre of dry lands converted into wet and Rs. 60 per acre in the case of existing wet and garden lands.

(*d*) In respect of—

	Dry lands newly converted into wet at Rs. 125 per acre in 12 instalments as detailed below	Existing wet and garden lands at Rs. 60 per acre in 5 instalments as detailed below
	At Rs. a. p.	At Rs. a. p.
1st year ...	3 8 0	7 8 0
2nd year ...	6 8 0	7 8 0
3rd year ...	6 8 0	15 0 0
4th year ...	8 8 0	15 0 0
5th year ...		15 0 0
6th year ...		
7th year ...		
8th year ...	At Rs. 12 8 0	
9th year ...	for 8 years (Rs. 100 0 0)	
10th year ...		
11th year ...		
12th year ...		
Total ...	125 0 0	60 0 0